೧೦.೫೦ ಎ.ಎಂ.

ಶ್ರೀ ಗೋಪಿನಾಥ್ ಆರ್. ಸಾಂಡ್ರ.—ಮಾನ್ಯ ಅಧ್ಯಕ್ಷರೇ, ಮಳೆ ಸಕಾಲದಲ್ಲಿ ಬರದೆ ಬಿತ್ತನೆಯಾಗದೆ ಹೊಲಗಳಲ್ಲಿ ಒಣೂ ಕೆಲಸವಿಲ್ಲದೆ ಕೂಲಿಕಾರರಿಗೆ ಬಹಳ ತೊಂದರೆಯಾಗಿದೆ. ಮಾನ್ಯ ಮಂತ್ರಿಗಳಿಗೆ ಅಧಿಕಾರಿಗಳು ಏನು ರಿಪೋರ್ಟ್ ಕೊಟ್ಟಿದ್ದಾರೆ ಅದು ಸರಿ ಇಲ್ಲ.....

ಛೇರ್ಮನ್.—ನಿಯಮ ೫೩ಳಿಗರಲ್ಲಿ ಚರ್ಚೆಗೆ ಅವಕಾಶ ಇಲ್ಲ. ತಾವು ಒಬ್ಬರು ಚರ್ಚೆ ಮಾಡಿದರೆ ಅದು ಒಂದು ಪದ್ಧತಿಯಾಗಿ ಮುಂದುವರಿಯುತ್ತದೆ. ದಯವಾಡಿ ಬೇಡ.

ಶ್ರೀ ಕೆ.ಎಚ್. ಪಾಟೀಲ್.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರ ಮನಸ್ಸನ್ನು ನಾನು ಅರಿತು ಕೊಂಡಿದ್ದೇನೆ. ಮಳೆ ಬಾರದೆ ಬಿತ್ತನೆ ಕೆಲಸ ಆಗದೆ ರೈತರಿಗೆ, ಕೂಲಿಕಾರರಿಗೆ ತೊಂದರೆಯಾಗಿರುವಂತಹ ಪ್ರಸಂಗದಲ್ಲಿ ಅವರಿಗೆ ಪೂರ್ಣವಾದಂಥ ಸಹಾಯವನ್ನು ಕೊಡುವುದರ ಸಲುವಾಗಿ ನಾನು ಇಂದೇ ಜಿಲ್ಲಾಧಿಕಾರಿಗಳಿಗೆ ತಿಳಿಸುತ್ತೇನೆ. ಆದರೆ ಎಲ್ಲೆ ಕೃಷಿ ಉದ್ಯೋಗ ನಡೆಯುತ್ತಿಡೆ ಅಂತಹ ಕಡೆ ಸಹ ಪರಿಸ್ಥಿತಿಯನ್ನು ಪರಾಮರ್ಶಿಸಿ ಕ್ರಮ ಕೈಗೊಳ್ಳಲಿಕ್ಕೆ ತಿಳಿಸುತ್ತೇನೆ.

ಅರ್ಜಿಗಳನ್ನು ಒಪ್ಪಿಸುವುದು

ಶ್ರೀ ಬಿ.ಎಂ. ಇದಿನಬ್ಬ.—ಮಾನ್ಯ ಅಧ್ಯಕ್ಷರೇ, ಹುಕ್ಕೇರಿ ತಾಲ್ಲೂಕಿನ ಹಿಡಕಲ್ ಜಲಾಶಯದ ಕರುಣೆ ಹಾಗೂ ಕೋಚರಿ ಯಾತ ೀರಾವರಿ ಯೋಜನೆಯ ಎರಡನೆಯ ಹಾಗೂ ಮೂರನೆಯ ಹಂತದ ಕೆಲಸವನ್ನು ಕೂಡಲೇ ಪ್ರಾರಂಭಿಸುವ ಬಗ್ಗೆ.

೨) ಬೆಂಗಳೂರು–ಪೂನಾ ಹೆದ್ದಾರಿಗೆ ಹೊಸ ಸೇತುವೆ ಆಗಿರುವ ಸ್ಥಳಗಳಲ್ಲಿ ಫಳಿ ಹಾಕಿ ನೀರು ನಿಲ್ಲಿಸುವ ಬಗ್ಗೆ.

೩) ಹುಕ್ಕೇರಿ ತಾಲ್ಲೂಕಿನ ಚಿಕ್ಕಾಲ ಗುಡ್ಡ–ಇಂಗಳಿ ರಸ್ತೆಯನ್ನು ಡಾಂಬರೀಕರಣಗೊಳಿಸುವ ಬಗ್ಗೆ.

೪) ಗೋಕಾಕ್ ತಾಲ್ಲೂಕಿನ ತವಗ ಗ್ರಾಮದಲ್ಲಿ ಕೆರೆ ನಿರ್ಮಿಸುವ ಬಗ್ಗೆ ಈ ನಾಲ್ಕು ಅರ್ಜಿಗಳನ್ನು ನಾನು ಸಭೆಗೆ ಒಪ್ಪಿಸುತ್ತೇನೆ.

ಛೇರ್ಮನ್.—ಅರ್ಜಿಗಳನ್ನು ಒಪ್ಪಿಸಲಾಯಿತು.

ಅಧ್ಯಕ್ಷರ ಅಪ್ಪಣೆ ಕೋರಿ ಪ್ರಸ್ತಾಪಿಸಲಾದ ವಿಷಯಂ. ಕುಲದೀಪ್ ಸಿಂಗ್ ಆಯೋಗದ ವರದಿ ಬಗ್ಗೆ ಚರ್ಚಿಸುವುದಂ.

ಶ್ರೀ ಎಲ್.ಆರ್. ಶಿವರಾಮೇಗೌಡ.—ಮಾನ್ಯ ಅಧ್ಯಕ್ಷರೇ, ಸಾರ್ವಜನಿಕ ಹಿತಾಸಕ್ತಿಯುಳ್ಳ ಮತ್ತು ಬಹಳ ಪ್ರಾಮುಖ್ಯವಾದ ವಿಷಯವಾಗಿರುವ ಶ್ರೀ ಕುಲದೀಪ್‌ಸಿಂಗ್ ಆಯೋಗದ ವರದಿಯನ್ನು ಚರ್ಚೆ ಮಾಡಬೇಕೆಂದು ನಾವು ಬರೆದು ಕೊಟ್ಟಿದ್ದೇವೆ. ಈಗಾಗಲೇ ಆ ವರದಿ ಪತ್ರಿಕೆಗಳಲ್ಲಿ ಬಿಡುಗಡೆಯಾಗಿದೆ. ವರದಿಯಲ್ಲಿರುವ ಎಲ್ಲಾ ವಿಚಾರಗಳು ಹೊರಗಡೆ ಬಂದಿವೆ. ಆದ್ದರಿಂದ ಅದರ ಬಗ್ಗೆ ನಮಗೆ ಚರ್ಚೆಗೆ ಅವಕಾಶ ಮಾಡಿಕೊಡಬೇಕು. ಈ ರಾಜ್ಯದಲ್ಲಿ ಭೂಮಿ ಹಗರಣ ನಡೆದಿದೆ. ಈ ಸದನದ ಒಬ್ಬ ಸದಸ್ಯರೂ ಸೇರಿದ್ದಾರೆ. ಹಿಂದೆ ಆ ಬಗ್ಗೆ ಚರ್ಚೆ ಮಾಡಿದಾಗ ಅಂದಿನ ಸರ್ಕಾರ ಈ ಸದನಕ್ಕೆ ತಪ್ಪು ಮಾಹಿತಿಯನ್ನು ಕೊಟ್ಟು ಸದನವನ್ನು ತಪ್ಪು ದಾರಿಗೆ ಎಳೆದಿರತಕ್ಕಂಥಾದ್ದು ಮತ್ತು ಈಗ ಬಂದಿರತಕ್ಕ ಚರ್ಚೆಗೂ ವಿಭಿನ್ನವಾಗಿರತಕ್ಕ ಈ ಸಂದರ್ಭದಲ್ಲಿ ನಾವು ಆ ವಿಷಯವನ್ನು ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇವೆ.

ಛೇರ್ಮನ್.—ನಿಯಮದ ಪ್ರಕಾರ ತಾವು ಕೇಳಬೇಕಾಗುತ್ತದೆ.

ಶ್ರೀ ಎಲ್. ಆರ್. ಶಿವರಾಮೇಗೌಡ.—ಮಾನ್ಯ ಅಧ್ಯಕ್ಷರೇ, ಸಾರ್ವಜನಿಕ ಹಿತಾಸಕ್ತಿ ಹೊಂದಿರತಕ್ಕ ವಿಷಯಗಳಿಗೆ ನಿಯಮಗಳು ಇಲ್ಲ. ಈ ವಿಷಯವನ್ನು ಚರ್ಚೆ ಮಾಡಲು ಮೇಲ್ಮನೆಯಲ್ಲಿ ಅವಕಾಶ ಕೇಳಿದ್ದಾರೆ. ಆದ್ದರಿಂದ ಇಲ್ಲಿ ತಾವು ಸಹ ಚರ್ಚೆಗೆ ಅವಕಾಶ ಕೊಡಬೇಕು. ಈ ರಾಜ್ಯದ ಭೂಮಿ ಹಗರಣವಾಗಿದೆ. ದಯವಾಡಿ ಈ ವಿಷಯವನ್ನು ಚರ್ಚೆ ಮಾಡಲು ಅವಕಾಶ ಮಾಡಿ ಕೊಡಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ.

ಛೇರ್ಮನ್.—ನಿಯಮಗಳ ಪ್ರಕಾರ ನಾವು ಹೋಗಬೇಕಾಗುತ್ತದೆ.